**ವ್ಯಾಖ್ಯಾನ**

# <u>ಗರುವವ್ಯಾತಕೊ ನಿನಗೆ ಪಾಮರ ಮನುಜನೆ</u>

ಗರುವವ್ಯಾತಕೊ ನಿನಗೆ ಪಾಮರ ಮನುಜನೆ
ಧರೆಯೊಳಗೆ ಕುರುಪತಿಗೆ ಸರಿಯೆನ್ನಬಹುದೆ || ಪ ||

ಬಲದಲ್ಲಿ ಹಲಧರನೆ ಛಲದಲ್ಲಿ ರಾವಣನೆ
ಕುಲದಲ್ಲಿ ವಸಿಷ್ಟ ಗೌತಮನೆ
ನೆಲೆಯಲ್ಲಿ ಭೃಗು ಮುನಿಯೆ ನೇಮದಲಿ ಗಾಂಗೇಯನೆ
ಒಲುಮೆಯಲಿ ವಾಲ್ಮೀಕಿ ಮುನಿಯೇನೊ ನೀನು || 1 ||

ಹಠದಲ್ಲಿ ಪ್ರಹ್ಲಾದನೆ ದಿಟದಲ್ಲಿ ಧ್ರುವರಾಯನೆ
ಶಠರೊಳಗೆ ವಿಶ್ವಾಮಿತ್ರನೆ ನೀನು
ವಿಟರೊಳು ಮನ್ಮಥನೆ ವೀರರೊಳು ಪಾರ್ಥನೆ
ಕುಟಿಲತನದಲಿ ಶಕುನಿಯೆ ನೀನು || 2 ||

ದಾನದೊಳು ಕರ್ಣನೆ ಗಾನದೊಳು ನಾರದನೆ
ಜ್ಞಾನದಲಿ ವ್ಯಾಸ ಶುಕ ಮುನಿಯೆ ನೀನು
ದೀನ ರಕ್ಷಕ ನಮ್ಮ ಪುರಂದರ ವಿಠಲನ್ನ
ಧ್ಯಾನದೊಳು ಇದ್ದು ಭವ ನೀಗು ಮನುಜ || 3 ||

**ಕೀರ್ತನೆಯ ಚಿಂತನೆ:**

**ಗರುವವ್ಯಾತಕೊ ನಿನಗೆ ಪಾಮರ ಮನುಜನೆ**
**ಧರೆಯೊಳಗೆ ಕುರುಪತಿಗೆ ಸರಿಯೆನ್ನಬಹುದೆ || ಪ ||**

ಪುರಂದರದಾಸರು ಪಾಮರ ಮನುಜನಿಗೆ ಅವನ ವಸ್ತು ಸ್ಥಿತಿಯ ಅರಿವು ಕೊಡುತ್ತಿದ್ದಾರೆ. ಒಣಜಂಬ, ಗರ್ವ, ಅಹಂ, ಮಮ ನಿರಾಕರಿಸುತ್ತಿದ್ದಾರೆ. ಈ ದೋಷಗಳಿಂದ ನಾಶಹೊಂದಿದವರ ಪಟ್ಟಿ ಕೊಡುತ್ತಾರೆ.

ಇವೇ ಛಲ, ಬಲ, ಕುಲ, ಹಠ, ಇವು ಸಾತ್ವಿಕವಾಗಿದ್ದಾಗ, ಭಗವಂತನ ಅನುಗ್ರಹ ಪಡೆಯುವದ-ಕ್ಕಾಗಿದ್ದಾಗ ಫಲವೂ ದಿವ್ಯವಾಗುತ್ತದೆ. ಅಂತು ಪಡೆದವರ ಪಟ್ಟಿಯನ್ನೂ ಕೊಡುತ್ತಾರೆ.

ಏನೇ ಆಗಲಿ, ಅಷ್ಟೊಂದು ಶಕ್ತಿ ಸಾಮರ್ಥ ನಿನ್ನ ಆಳ ಅಲ್ಲ ಮನುಜ. ನೀನು ಅಲ್ಪ, ಅಸ್ಥಿರ. ಅದಕ್ಕಾಗಿ ನಿನಗಿಲ್ಲದ್ದನ್ನು ಇದೆ ಎಂದು ಭ್ರಮಿಸ ಬೇಡ. ಜಂಬ ಬೇಡ. ಡಂಭ ಬೇಢ. ಅಹಂ ಹೆಚ್ಚಿ ಗರ್ವಪಟ್ಟು ಪತನ ಬೇಡ.

ತಥ್ಯ ತಿಳಿ. ಸಾತ್ವಿಕನಾಗು. ಸಾಧನೆ ಮಾಡು. ಉನ್ನತಿ ಹೊಂದು. ಎಂಬ ಸಂದೇಶ ಅಡಗಿಸಿದ್ದಾರೆ.
ಹರಿ ಮಹಾತ್ಮ ತಿಳಿ. ಜ್ಞಾನ ಪಡೆ. ಧ್ಯಾನ ಮಾಡು. ಅನುಗ್ರಹ ಹೊಂದು. ಭವ ನೀಗು. ಎಂಬ ಹಿತೋಪದೇಶ ಹೇಳಿದ್ದಾರೆ.

**ಬಲದಲ್ಲಿ ಹಲಧರನೆ ಛಲದಲ್ಲಿ ರಾವಣನೆ**
**ಕುಲದಲ್ಲಿ ವಸಿಷ್ಟ ಗೌತಮನೆ**
**ನೆಲೆಯಲ್ಲಿ ಭೃಗು ಮುನಿಯೆ ನೇಮದಲಿ ಗಾಂಗೇಯನೆ**
**ಒಲುಮೆಯಲಿ ವಾಲ್ಮೀಕಿ ಮುನಿಯೇನೊ ನೀನು || 1 ||**

ಕುಲಶ್ರೇಷ್ಠರು ಮುನಿ ಜೇಷ್ಠರು ವಶಿಷ್ಠರು, ಗೌತಮರು. ಹರಿ ಸರ್ವೋತ್ತಮತೆ ಸಾರಿದವರು ಭೃಗು ಮಹರ್ಷಿಗಳು.

ನಿಷ್ಠೆಯಲಿ ರಾಮನಾಮ ಜಪಿಸಿದ ವಾಲ್ಮೀಕಿ. ರಾಮನ ಒಲುಮೆ ಪಡೆದ. ರಾಮಾಯಣ ರಚಿಸಿದ. ಶ್ರೀರಾಮನಿಗೆ ಬಹು ಇಷ್ಟ ತಾನಾದ. ಇವರೆಲ್ಲ ಪರಮಾತ್ಮನನ್ನು ಕಂಡವರು. ಧನ್ಯರಾದವರು.

ಹೇ, ಪಾಮರ ಮನುಜಾ, ಶ್ರೇಷ್ಠ ಕುಲದವ ನಾನು. ವಿಶಿಷ್ಠ ನೆಲೆಯವ ನಾನು. ತಪನಿಷ್ಠ ನಾನು. ವರಿಷ್ಠ ನಾನು. ಎಂದೆಲ್ಲ ಹಾರಾಡುವಿಯಲ್ಲ. ಗರ್ವ ಪಡುತ್ತಿರುವೆಯಲ್ಲ! ನಿನ್ನ ಕುಲದ ನೆಲೆಯ ಬಲ್ಲೆಯಾ? ಹರಿಯ ಅರಿವಿನ ಆಳ ಗೊತ್ತಾ? ನೀನೇನು ಬಲ್ಲೆ ಬಡ ಮನುಜ!

ಆ ಮುನಿಗಳ ಮಹಿಮೆ ನೋಡು. ನಿನ್ನ ಮನವ ಶೋಧಿಸು.
ನಿನ್ನ ಅವರತ್ವ ಕಾಣು. ಸಾಧನೆಗೆ ಸಿದ್ದನಾಗು. ಋಷಿ ಮುನಿಗಳ ಅನುಗ್ರಹ ಪಡೆ. ಹರಿಯತ್ತ ನಡೆ.
ಇನ್ನು ನಾನು ಬಲಿಷ್ಠ, ಛಲಗಾರ, ಬಲು ವ್ರತ ನೇಮಿಷ್ಠ ಎಂದು ಇಲ್ಲದ್ದು ಇದೆ ಎಂದು ಭ್ರಮಿಷ್ಠನಾಗಲು ಬೇಡ.

ಆತ ಗಂಗೆಯ ಸುತ. ನೂರಾರುವರ್ಷ ಬಲು ನಿಷ್ಠೆಲಿ ಪರಶುರಾಮರಲ್ಲಿ ಶಾಸ್ತ್ರ ಓದಿದರು. ತಂದೆಗಾಗಿ ಆಜನ್ಮ ಬ್ರಹ್ಮಚರ್ಯ ಪಾಲಿಸದರು. ಅಂಥ ಭೀಷ್ಮರೆಲ್ಲಿ? ವ್ರತವೊಂದು ಮಾಡಲರಿಯದ ಅಜ್ಞಾನಿ ಮನುಜ ನೀನೆಲ್ಲಿ! ಬಲದಲ್ಲಿ ಭೀಮ, ಬಲರಾಮರಿರುವರು. ಎಲ್ಲಿಯ ಅವರು? ಇಲ್ಲಿಯ ನೀನೆಲ್ಲಿ? 'ಹಿತ ಅಕರಣ. ಅಹಿತ ಕರಣ.' ನಿನ್ನ ಸುಖ ಪಡೆಯಲು, ನಿನ್ನ ದುಃಖ ದೂರ ಮಾಡಲು ಬಲವಿಲ್ಲವೈ ನಿನ್ನಲ್ಲಿ.

ನಿತ್ಯ ಸುಖ ನಿನಗಿಲ್ಲ. ಮತ್ತೇಕೆ ಬಲವಿದೆ ಎಂಬ ಬರಿದ ಭ್ರಾಂತಿ? ಇಲ್ಲದ ಬಲ ಇದೆ ಎಂದು ಬರಿದೆ ಛಲ ಮಾಡಬೇಡ. ಬಲಶಾಲಿ ಬಲು ಛಲಗಾರರಾದ ರಾವಣ, ದುರ್ಯೋಧನಾದಿಗಳೇ ನೆಲೆ ಕಾಣಲಿಲ್ಲ. ನಿನ್ನನ್ನು ನೀ ತಿಳಿ.

**ಹಠದಲ್ಲಿ ಪ್ರಹ್ಲಾದನೆ ದಿಟದಲ್ಲಿ ಧ್ರುವರಾಯನೆ**
**ಶಠರೊಳಗೆ ವಿಶ್ವಾಮಿತ್ರನೆ ನೀನು**
**ವಿಟರೊಳು ಮನ್ಮಥನೆ ವೀರರೊಳು ಪಾರ್ಥನೆ**
**ಕುಟಿಲತನದಲಿ ಶಕುನಿಯೆ ನೀನು || 2 ||**

ಮತ್ತೆ ದಾಸರು ಸಾತ್ವಿಕ ಹಠ, ಧೃಡತೆ, ಶೌರ್ಯಾದಿ ಕ್ಷೇತ್ರಗಳಲ್ಲಿ ದಿಗ್ಗಜರ ಹೆಸರಿಸುತ್ತಾರೆ. ಅವರ ಜೊತೆ ತುಲನೆಗೂ ನಿಲುಕದ ಬಡಪಾಯಿ ನೀನು. ಇಲ್ಲದ ಆತ್ಮಸ್ತುತಿ ಮಾಡಿಕೊಳ್ಳ ಬೇಡ. ಕೆಡಬೇಡ. ಎಂದು ಹಿತಮಾತು ಹೇಳುತ್ತಾರೆ.

**'ರಕ್ಷತಿ ಇತ್ಯೇವ ವೀಶ್ವಾಸಃ'** ಶ್ರೀಹರಿಯೇ ಸರ್ವರ ರಕ್ಷಕ ಎಂಬ ಸಾತ್ವಿಕ ಹಠ ಬಾಲ ಪ್ರಲ್ಹಾದನದು.
'ನಾನೇ ನನ್ನ ಮಗನನ್ನು ಮುಗಿಸುತ್ತೇನೆ' ಎಂಬ ತಾಮಸ ಹಠ ಹಿರಣ್ಯಕಶಿಪುವಿನದು.
ಸಾತ್ವಿಕತೆಗೆ ಜಯ. ತಮಕ್ಕೆ ಅಪಜಯ. ಪ್ರಲ್ಹಾದ ಗೆದ್ದ. ದೈತ್ಯ ಬಿದ್ದ.

ಚಿಕ್ಕ ಬಾಲಕ. ದಟ್ಟ ಅಡವಿ ಕ್ರೂರ ಮೃಗಗಳು. ಅನ್ನ, ನೀರು ಇಲ್ಲ.
ನಾರಾಯಣನ್ನು ಪಡೆಯಲೇ ಬೇಕು. ಧ್ರುಡ ನಿಶ್ಚಯ. ಧ್ರುವರಾಯನದು.
ಸಾತ್ವಿಕ ಧೃಡತೆ ಸಾಧಿಸಿತು. ಧ್ರುವಬಾಲಕನಿಗೆ ಹರಿ ದರ್ಶನ.

ಕ್ಷತ್ರಿಯ ರಾಜ ವಿಶ್ವಾಮಿತ್ರ. ಬ್ರಾಹ್ಮಣ್ಯ ಬೇಕು. ಬ್ರಹ್ಮರ್ಷಿಯಾಗ ಬೇಕು. ಬಯಕೆಯ ಹಠ. ಸಾವಿರಾರು ವರ್ಷ ತಪದ ಸಾಧನೆ ಮಾಡಿದರು. ದೈವ ಒಲಿಯಿತು. ಇಚ್ಛೆ ಪೂರೈಸಿತು.

ಇಂಥ ಸಾತ್ವಿಕ ಗುಣಗಳು. ಲೇಶಾಂಶ ನಿನ್ನಲ್ಲಿ ಇಲ್ಲ. ಮತ್ತೇಕೆ ಒಗ್ಗದ ಕನಸುಗಳು ಮನುಜಾ? ಮತ್ತೇನಿದೆ ನಿನ್ನಲ್ಲಿ? ಸುಂದರನೆಂದು ಬೀಗ ಬೇಡ. ಅದ್ವಿತೀಯ ಮನ್ಮಥನ ಲಾವಣ್ಯ ನಿನ್ನಲ್ಲಿ ಇದೆಯಾ?

ಮೂರುಲೋಕದ ಗಂಡ, ಅದ್ವಿತೀಯ ಧನುರ್ಧಾರಿ ಅರ್ಜುನ ವೀರ, ಪರಮ ಶೂರ. ಅಂಥ ವೀರ್ಯ ನಿನ್ನಲ್ಲುಂಟೋ? ಇಲ್ಲವೇ ಇಲ್ಲ. ಮತ್ತೇಕೆ ಜಗದೇಕವೀರನೆಂದು ತಿಳಿಯುತ್ತಿ? ಕುಟಿಲತನದಲ್ಲಿ ಶಕುನಿ ಅಗ್ರೇಸರ. ಅಂತ ಕುಟಿಲತೆಯೂ ನಿನ್ನಲ್ಲಿಲ್ಲ. ಅಂಥ ಸಾತ್ವಿಕರ ಹಾಳುಮಾಡುವ ಕುಟಿಲತೆ ಬೇಡ. ಭಾಗವತರ ಉಳಿಸಲು ಕುಟಿಲತೆ ಇರಲಿ.

**ದಾನದೊಳು ಕರ್ಣನೆ ಗಾನದೊಳು ನಾರದನೆ**
**ಜ್ಞಾನದಲಿ ವ್ಯಾಸ ಶುಕ ಮುನಿಯೆ ನೀನು**
**ದೀನ ರಕ್ಷಕ ನಮ್ಮ ಪುರಂದರ ವಿಠಲನ್ನ**
**ಧ್ಯಾನದೊಳು ಇದ್ದು ಭವ ನೀಗು ಮನುಜ || 3 ||**

ನಾನು ದೊಡ್ಡಜ್ಞಾನಿ. ಮಹಾ ದಾನಿ. ನಾನು ನಾರದರಂತೆ ಗಾನದಿ ಹರಿಯಾರಾಧಿಸುವೆ. ಎಂದೆಲ್ಲ ಬೀಗ ಬೇಡ. ಜ್ಞಾನ, ದಾನ, ಗಾನ ಮೂರೂ ಕ್ಷೇತ್ರಗಳಲ್ಲಿ ನಿನ್ನ ಆತ್ಮಶೋಧನೆ ಮಾಡೆಲೋ ಮನುಜ.
ಜ್ಞಾನದಲಿ ಅದ್ವಿತೀಯ ಸರ್ವಜ್ಞಮೂರ್ತಿ ವೇದವ್ಯಾಸರು. ಅವರ ಸುಪುತ್ರ ಶುಕಮುನಿ. ವಿಖ್ಯಾತ ಭಾಗವತ ಜ್ಞಾನದ ಖಣಿಗಳು. ಗಾಯನದಲಿ ಗಾನವಿಶಾರದರು ಮಹರ್ಷಿ ನಾರದರು. ಅವರ ಗಾನಕ್ಕೆ ಒಲಿಯುವವ ಗಾನಲೋಲ ನಾರಾಯಣ. ದ್ವಾಪರದ ಕರ್ಣ ದಾನದಲಿ ಹೆಸರುವಾಸಿ.
ನಿನಗೂ ಅವರಿಗೂ ಎಲ್ಲಿಯ ತುಲನೆ? ಭೂಮಿ-ಆಕಾಶ ಅಂತರ!
ಮತ್ತೇಕೆ ಅನವಶ್ಯ ಜಂಭ ಪಾಮರ?

ಅವೆಲ್ಲ ಬಿಡು ಬಿಡು. ಯಜ್ಞ, ದಾನ, ತಪ ಮಾಡು. ಹರಿಭಜನೆ ಮಾಡೋ ನಿರಂತರ. ಹರಿಯ ಗಾನದಿ ಆರಾಧಿಸು. ಮೆಚ್ಚಿಸು.

ಧ್ಯಾನದಿ ಸರ್ವಜ್ಞಮೂರ್ತಿಯ ಒಲಿಸು. ಉದ್ಧರಿತನಾಗು. ಭವ ನೀಗು.
ಮನದ ಮನೆಯಲ್ಲಿ ಆಡುವ. ಹೃದಯ ಆಕಾಶದಲಿ ತೋರುವ.
ದೀನರ ಉದ್ಧಾರಕ್ಕಾಗಿ ಸೊಂಟದ ಮೇಲೆ ಕೈ ಇಟ್ಟು ನಿಂತಿರುವ ವಿಠ್ಠಲರಾಯ.
ಎಂದೆಲ್ಲ ಹಿತೋಪದೇಶ ಮಾಡುತ್ತಾರೆ ದಾಸರು. ಭಂಡ ಮನುಜನ ಗರ್ವ ನಿರಾಕರಿಸುತ್ತಾರೆ. ಬೂಟಕತನದ ಭಕುತಿ ಬೇಡ.
ಅಜ್ಞಾನ ಒಳಗಿಟ್ಟು. ದಿಟನೀತ ಜ್ಞಾನಿ, ಸರಿ ಯಾರಿಲ್ಲ ಎನಿಸಿಕೊಳ್ಳಲು ಬೇಡ. ನಟನಂತೆ ಬಯಲು ಡಂಭವು ಬೇಡ.

ಜ್ಞಾನಿಗಳ ಕೂಡ ಆಡು.  ಒಡನಾಡು.  ಮೌನದಿ ಧ್ಯಾನ ಮಾಡು.  ಸಾಧನೆ ಮಾಡು.  ದಯಾನಿಧಿ ವಿಠ್ಠಲನ ಅನುಗ್ರಹ ಪಡೆ.  ಎಂದು ಭವ ನೀಗುವ ಬಗೆ ಹೇಳಿಕೊಡುತ್ತಾರೆ.  ಪಾಮರರ ಉದ್ಧಾರ ಬಯಸುತ್ತಾರೆ ದಾಸವರೇಣ್ಯರು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ